ಇವೊತ್ತು ಬಡ ವಿದ್ಯಾರ್ಥಿಗಳಿಗೆ ಸಿಗಬೇಕಾದ ಸಾಮಾಜಿಕ ನ್ಯಾಯಕ್ಕೆ ಹೊಡೆತ ತರುವಂಥ ಕೆಲಸವನ್ನು ಇವರು ಮಾಡುತ್ತಿದ್ದಾರೆ. ಆದುದರಿಂದ ಸಿಇಟಿ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವನ್ನು ಇವೊತ್ತೇ ಹೇಳಬೇಕು. ಇಂದು ಆಗುವುದಿಲ್ಲ, ನಾಳೆ ಕ್ಯಾಬಿನೆಟ್ ಡಿಸಿಶನ್ ತೆಗೆದುಕೊಂಡು ಹೇಳುತ್ತೇವೆ ಎಂದರೆ ನಾಳೆಯೇ ಸದನದಲ್ಲಿ ಹೇಳಲಿ. ಆ ಬಗ್ಗೆ ತೀರ್ಮಾನ ಸರ್ಕಾರಕ್ಕೆ ಬಿಟ್ಟದ್ದು. ನಾಳೆ ಇದರ ಬಗ್ಗೆ ಹೇಳುವುದಾದರೆ ನಾಳೆಗೆ ಸದನವನ್ನು ತಾವು ಮುಂದೂಡಿ.

ಅಧ್ಯಕ್ಷರು:- ನಾಳಿದ್ದೇ ಯುಗಾದಿ ಹಬ್ಬ ಇರುವುದರಿಂದ ಅನೇಕ ಶಾಸಕರುಗಳು ಅವರ ಕ್ಷೇತ್ರಗಳಿಗೆ ಹೋಗಲು ಈಗಾಗಲೇ ಟಿಕೆಟ್ ಬುಕ್ ಮಾಡಿಸಿದ್ದಾರೆ. ಆದ್ದರಿಂದ I have to take the sense of the House. ನಾಳೆಗೆ ಸದನವನ್ನು ಕರೆಯಬೇಕು ಎಂದರೆ ಸದನದಲ್ಲಿಯೇ ಆ ಬಗ್ಗೆ ಈಗ ಕೇಳೋಣ. If the House says we can meet tommorrow, I have no objection.

(ಗೊಂದಲ)

ಅಧ್ಯಕ್ಷರು:- ಚಂದ್ರೇಗೌಡರೆ, ತಾವು ವಿಧೇಯಕವನ್ನು ಪರ್ಯಾಲೋಚನಾ ಪ್ರಸ್ತಾವಕ್ಕೆ ಮಂಡಿಸಿ.

3) ಶಾಸನ ರಚನೆ

ಅ) ಪರ್ಯಾಲೋಚನಾ ಪ್ರಸ್ತಾವ

(i) ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2002

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, "2002ರ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ,

"2002ರ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2002 (2002ರ ವಿಧಾನಸಭೆಯ ವಿಧೇಯಕ ಸಂಖ್ಯೆ 30)ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಸದರಿ ವಿಧೇಯಕದಲ್ಲಿ 2ನೇ ಖಂಡವನ್ನು ಅದರ 3ನೇ ಖಂಡವೆಂಬುದಾಗಿ ಮರು ಸಂಖ್ಯೆ ನೀಡತಕ್ಕದ್ದು ಮತ್ತು ಹಾಗೆ 2ನೇ ಖಂಡಕ್ಕೆ ಮರು ಸಂಖ್ಯೆ ನೀಡುವ ಮೊದಲು ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:-

"2. 8ನೇ ಪ್ರಕರಣದ ತಿದ್ದುಪಡಿ:- ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ರ (1957ರ ಕರ್ನಾಟಕ ಅಧಿನಿಯಮ 2) (ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 8ನೇ ಪ್ರಕರಣದ, 2ನೇ ಉಪ ಪ್ರಕರಣದ (ಬಿ) ಖಂಡದಲ್ಲಿ "ಎಂಟು ರೂಪಾಯಿಗಳ" ಎಂಬ ಪದಗಳಿಗೆ "ಹತ್ತು ರೂಪಾಯಿಗಳ"

ಸದರಿ ವಿಧೇಯಕದಲ್ಲಿ (2) (3)ನೇ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"3. 12ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 12ನೇ ಪ್ರಕರಣದಲ್ಲಿ;

(ಎ) (ಎ) ಖಂಡದಲ್ಲಿ "ಆರು ರೂಪಾಯಿಗಳ" ಎಂಬ ಪದಗಳಿಗೆ "ಎಂಟು ರೂಪಾಯಿಗಳ"

(ಬಿ) (ಸಿಸಿ) ಖಂಡಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:

"(ಸಿಸಿ) ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಪ್ರತಿಯೊಬ್ಬ ಸದಸ್ಯನು ಚುನಾವಣಾ ಕ್ಷೇತ್ರ ಪ್ರಯಾಣ ಭತ್ಯೆಯಾಗಿ ವಾರ್ಷಿಕ ಹದಿನೈದು ಸಾವಿರ ರೂಪಾಯಿಗಳ ಮೊಬಲಗನ್ನು ಎರಡು ಸಮಾನ ಕಂತುಗಳಲ್ಲಿ ಏಪ್ರಿಲ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ನಿಯಮಿಸಬಹುದಾದ ರೀತಿಯಲ್ಲಿ ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದು.

(ಸಿ) (ಡಿ) ಖಂಡದಲ್ಲಿ "ನಿಯಮಿಸಬಹುದಾದಂತೆ, ದಿನವೊಂದಕ್ಕೆ ಎರಡು ರೂಪಾಯಿಗಳಿಗೆ ಕಡಿಮೆಯಾಗಿಲ್ಲದ ಅಂಥ ಬಾಡಿಗೆಯ" ಎಂಬ ಪದಗಳಿಗೆ "ಕಾಲ ಕಾಲಕ್ಕೆ ಮಂಡಳಿಯು ನಿರ್ದಿಷ್ಟ ಪಡಿಸಬಹುದಾದಂಥ ಬಾಡಿಗೆಯ"

(ಡಿ) (ಐ)ನೇ ಬಾಬಿನಲ್ಲಿ, (ಹೆಚ್) ಖಂಡದಲ್ಲಿ "ತಿಂಗಳಿಗೆ ಐದು ಸಾವಿರ ರೂಪಾಯಿಗಳ" ಎಂಬ ಪದಗಳಿಗೆ "ತಿಂಗಳಿಗೆ ಆರು ಸಾವಿರದ ಐದನೂರು ರೂಪಾಯಿಗಳ"

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ;

"ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2002 (2002ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 30)ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುವುದು.

ಸದರಿ ವಿಧೇಯಕದಲ್ಲಿ 2ನೇ ಖಂಡವನ್ನು ಆದರ 3ನೇ ಖಂಡವೆಂಬುದಾಗಿ ಮರು ಸಂಖ್ಯೆ ನೀಡತಕ್ಕದ್ದು ಮತ್ತು ಹಾಗೆ 2ನೇ ಖಂಡಕ್ಕೆ ಮರು ಸಂಖ್ಯೆ ನೀಡುವ ಮೊದಲು ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"2. 8ನೇ ಪ್ರಕರಣದ ತಿದ್ದುಪಡಿ:- ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮದ, 1956ರ (1957ರ ಕರ್ನಾಟಕ ಅಧಿನಿಯಮ 2) (ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 8ನೇ ಪ್ರಕರಣದ, 2ನೇ ಉಪ ಪ್ರಕರಣದ, (ಬಿ) ಖಂಡದಲ್ಲಿ "ಎಂಟು ರೂಪಾಯಿಗಳ" ಎಂಬ ಪದಗಳಿಗೆ "ಹತ್ತು ರೂಪಾಯಿಗಳ"

ಸದರಿ ವಿಧೇಯದಕಲ್ಲಿ (2) (3)ನೇ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"3. 12ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 12ನೇ ಪ್ರಕರಣದಲ್ಲಿ;

(ಎ) (ಎ) ಖಂಡದಲ್ಲಿ "ಆರು ರೂಪಾಯಿಗಳ" ಎಂಬ ಪದಗಳಿಗೆ "ಎಂಟು ರೂಪಾಯಿಗಳ"

(ಬಿ) (ಸಿಸಿ) ಖಂಡಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:

"(ಸಿಸಿ) ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಪ್ರತಿಯೊಬ್ಬ ಸದಸ್ಯನು ಚುನಾವಣಾ ಕ್ಷೇತ್ರ ಪ್ರಯಾಣ ಭತ್ಯೆಯಾಗಿ ವಾರ್ಷಿಕ ಹದಿನೈದು ಸಾವಿರ ರೂಪಾಯಿಗಳ ಮೊಬಲಗನ್ನು ಎರಡು ಸಮಾನ ಕಂತುಗಳಲ್ಲಿ ಏಪ್ರಿಲ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ನಿಯಮಿಸಬಹುದಾದ ರೀತಿಯಲ್ಲಿ ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದು.

(ಸಿ) (ಡಿ) ಖಂಡದಲ್ಲಿ "ನಿಯಮಿಸಬಹುದಾದಂತೆ, ದಿನವೊಂದಕ್ಕೆ ಎರಡು ರೂಪಾಯಿಗಳಿಗೆ ಕಡಿಮೆಯಾಗಿಲ್ಲದ ಅಂಥ ಬಾಡಿಗೆಯ" ಎಂಬ ಪದಗಳಿಗೆ "ಕಾಲ ಕಾಲಕ್ಕೆ ಮಂಡಳಿಯು ನಿರ್ದಿಷ್ಟ ಪಡಿಸಬಹುದಾದಂಥ ಬಾಡಿಗೆಯ"

(ಡಿ) (ಐ)ನೇ ಬಾಬಿನಲ್ಲಿ, (ಹೆಚ್) ಖಂಡದಲ್ಲಿ "ತಿಂಗಳಿಗೆ ಐದು ಸಾವಿರ ರೂಪಾಯಿಗಳ" ಎಂಬ ಪದಗಳಿಗೆ "ತಿಂಗಳಿಗೆ ಆರು ಸಾವಿರದ ಐದನೂರು ರೂಪಾಯಿಗಳ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಹೊಸ ಖಂಡ 2 ಹಾಗೂ ಮರು ಸಂಖ್ಯೆಗೊಂಡ ಖಂಡ 3

ಅಧ್ಯಕ್ಷರು.- "ಹೊಸದಾಗಿ ಸೇರಿಸಿದ 2ನೇ ಖಂಡ ಹಾಗೂ ಮರು ಸಂಖ್ಯೆಗೊಂಡ 3ನೇ ಖಂಡವು ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಹೊಸ ಖಂಡ 2 ಹಾಗೂ ಮರು ಸಂಖ್ಯೆಗೊಂಡ 3ನೇ ಖಂಡ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, "2002ರ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು

ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯೊಂದಿಗೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.- ಪ್ರಸ್ತಾವ ಏನೆಂದರೆ;

"2002ರ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯೊಂದಿಗೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಲ್ಪಟ್ಟಿತು ಮತ್ತು ಮಸೂದೆಯ ಬಗ್ಗೆ ಒಪ್ಪಿಗೆ ನೀಡಲಾಯಿತು

(ii) ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2002

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ನೇ ಸಾಲಿನ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು.- ಪ್ರಸ್ತಾವ ಏನೆಂದರೆ;

"ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ನೇ ಸಾಲಿನ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು ಖಂಡ 3

ಅಧ್ಯಕ್ಷರು.- ಪ್ರಸ್ತಾವ ಏನೆಂದರೆ:-

"ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತುದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)